ಮಾಹಿತಿಯಿಂದ ಉತ್ತರ ಕೊಡುವ ಹಾಗಿದ್ದಿದ್ದರೆ ಸುಲಭವಾಗಿ ಕೊಟ್ಟುಬಿಡುತ್ತಾರೆ. ಆದ್ದರಿಂದ ಉದ್ದೇಶಪೂರ್ವಕವಾಗಿ ಯಾವುದನ್ನೂ ತಡೆಹಿಡಿಯುವುದಕ್ಕಾಗುವುದಿಲ್ಲ. ಸಕಾರಣವಾಗೇ ಸ್ವಲ್ಪ ಸಮಯ ಕೇಳಿದ್ದಾರೆ.

Mr. Speaker :- Internet, E-Mail ಏನೇನೋ ಇದೆಯಲ್ರೀ?

ಶ್ರೀ ಶಿವಾನಂದ ಎಸ್ ಪಾಟೀಲ್ :- ಮತ್ತೆ E-governance ತಮ್ಮದು. ಎಲ್ಲಾ express ತರಹ ಇರಬೇಕು

ಶ್ರೀ ಕಾಗೋಡು ತಿಮ್ಮಪ್ಪ :- ಉತ್ತರವನ್ನು ಕಂಪ್ಯೂಟರ್‌ನಲ್ಲಿ ತರಿಸುವುದಕ್ಕಾಗುತ್ತದಾ?

Sri Jagadish Shettar :- Fax Video conference ಎಲ್ಲಾ ಇದೆ ನಿಮ್ಮ ಹತ್ತಿರ E-governance ಇವನ್ನೆಲ್ಲಾ ಪತ್ರಿಕೆಗಳಲ್ಲಿ Photo ತೆಗೆಸಿಕೊಳ್ಳಲು ಶುರುಮಾಡಿದಿರಾ?

Sri Kagodu Thimmappa :- E-governance ಅಂದರೆ ಅದರಲ್ಲಿ ಯಾವ್ಯಾವುದು ಆಡಳಿತ ಸುಧಾರಣೆ ಅಂತ ಪಟ್ಟಿ ಇದೆ ಕಳುಹಿಸುವುದು ತರಿಸುವುದನ್ನು E-mail ನಲ್ಲಿ ಮಾಡುವುದಕ್ಕಾಗುತ್ತದಾ? ಆ ವ್ಯವಸ್ಥೆ ಎಲ್ಲಿದೆ?

ಅಧ್ಯಕ್ಷರು :- ತಿಮ್ಮಪ್ಪನವರೇ ಮೊನ್ನೆ ಎಲ್ಲಾ ಸಚಿವರಿಗೂ ಪರ್ಸನಲ್ ಆಗಿ ಪತ್ರ ಬರೆದಿದ್ದೇನೆ. ಇರುವುದೇ ಇನ್ನೆರಡು ವಾರ.

ಶ್ರೀ ಕಾಗೋಡು ತಿಮ್ಮಪ್ಪ :- ಬಂದಿದೆ. ಅದರ ಪ್ರಕಾರ ನಾವು ಸಿದ್ಧತೆ ಮಾಡುತ್ತಿದ್ದೇವೆ.

ಶ್ರೀ ಜಗದೀಶ ಶೆಟ್ಟರ್ :- ತಾವು ಒಂದು ಸಲ ಸರ್ಕಾರಕ್ಕೆ ಛೀಮಾರಿ ಹಾಕಬೇಕಾಗುತ್ತದೆ, ಆಗ ಸ್ವಲ್ಪ ಎಚ್ಚರವಾಗುತ್ತದೆ, ಇಲ್ಲಾಂದರೆ ಇಲ್ಲೇ ಇಲ್ಲ.

ಶ್ರೀ ಕಾಗೋಡು ತಿಮ್ಮಪ್ಪ :- ಇಲ್ಲ ಇಲ್ಲ. ಸುಮ್ಮನೆ ಹೇಳಬೇಕೆಂದು ಹೇಳುತ್ತಾರೆ ಅಷ್ಟೇನೇ.

ಅಧ್ಯಕ್ಷರು :- ನೋಡೀಪ್ಪ next time ನೀವು ತರಿಸದೇ ಇದ್ದರೆನಾನು ಛೀಮಾರಿ ಹಾಕಬೇಕಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ :- ಆಯಿತು

ಅಧ್ಯಕ್ಷರು :- ಗುರುಸ್ವಾಮಿಯವರೇ, you come to my chamber ಈಗ ಸಮಯವಿಲ್ಲ.

ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ಕೆರೆಗಳಲ್ಲಿ ಶಾಹಾಬಾದ್ ಪರ್ಶಿಗಳ ಕಳವು

369 (3001) : ಶ್ರೀ ಬಸವಂತರೆಡ್ಡಿ ಮೊತಕಪಲ್ಲಿ (ಸೇಡಂ) ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ಕೆರೆಗಳ ಕಾಲುವೆಗಳ ನಿರ್ಮಾಣಕ್ಕಾಗಿ ಶಹಬಾದ್ ಪರ್ಶಿಗಳನ್ನು ಉಪಯೋಗಿಸಿದರೆ ಈ ಪರ್ಶಿಗಳನ್ನು ಎರಡು ತಿಂಗಳಲ್ಲಿ ಕಳುವು ಮಾಡಿಕೊಂಡು ಹೋಗುವುದು ನಿಜವಲ್ಲವೇ;

ಆ) ಹಾಗಿದ್ದರೆ, ಇದರಿಂದ ಆ ಕಾಲುವೆಗಳು ಹೂಳು ತುಂಬಿ ನೀರು ಸರಬರಾಜಾಗದೇ ರೈತರಿಗೆ ನಷ್ಟವಾಗುವುದಿಲ್ಲವೇ;

ಇ) ಅದಕ್ಕಾಗಿ ಕಾಲುವೆಗಳಲ್ಲಿ ಆಯಾ ಭಾಗದಲ್ಲಿ ಸಿಗುವ ಕಲ್ಲು ಗ್ರಾನೈಟು ಹಾಗೂ ಶಹಬಾದ್ ಕಲ್ಲು ಇತ್ಯಾದಿಗಳಿಂದ ನಿರ್ಮಾಣ ಮಾಡದೆ ಸಿಮೆಂಟು ಕಾಂಕ್ರೀಟ್‌ನಿಂದ ನಿರ್ಮಾಣ ಮಾಡಿ ಅನುಕೂಲ ಮಾಡಿಕೊಡಲು ಕ್ರಮ ಕೈಗೊಳ್ಳಬಹುದೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು)

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ಕೆರೆಗಳಲ್ಲಿ ಕೆಲವು ಕಡೆಗಳಲ್ಲಿ ಸ್ವಲ್ಪ ಪ್ರಮಾಣದಲ್ಲಿ ಶಾಹಾಬಾದ್ ಪರ್ಶಿಗಳು ಕಳುವಾಗಿರುವುದು ನಿಜ.

ಆ) ನೀರು ಸರಬರಾಜಿಗೆ ತೊಂದರೆಯಾಗದಂತೆ ನೋಡಿಕೊಳ್ಳಲಾಗುತ್ತದೆ.

ಇ) ಅನುದಾನದ ಲಭ್ಯತೆಗನುಗುಣವಾಗಿ ಈ ಸಲಹೆಯನ್ನು ಜಾರಿಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ :– ಅಧ್ಯಕ್ಷರೇ, ನನ್ನ ಆ ಪ್ರಶ್ನೆಗೆ ನಿಜವೆಂದು ಒಪ್ಪಿದ್ದಾರೆ ಸಚಿವರು ಮಾನ್ಯ ಸಚಿವರು ತಮ್ಮ ಪ್ರವಾಸದಲ್ಲಿ, ಅಲ್ಲಲ್ಲಿ ತಮ್ಮ ಕಾರನ್ನು ನಿಲ್ಲಿಸಿ ಆ ಕೆಲಸಗಳನ್ನು ನೋಡುವವರು ಅದೇ ರೀತಿ ಈ ಕಾಲುವೆಗಳನ್ನು ನೋಡಿ ಈ ಪರ್ಶಿಗಳು ಕಳುವಾಗಿದೆ ಎಂದು ಒಪ್ಪಿದ್ದಕ್ಕಾಗಿ ಸಂತೋಷ; ಆದರೆ ಸ್ವಲ್ಪ ಪ್ರಮಣದಲ್ಲಿ ಕೆಲವು ಕಡೆ ಎಂದು ತಿಳಿಸಿದ್ದಾರೆ. ಆದರೆ ಹೆಚ್ಚಾಗಿ ಎಲ್ಲಾ ಕೆರೆಗಳ ಕಾಲುವೆಗಳಲ್ಲಿ 75–80 ಪ್ರತಿ ಶತ ಪರ್ಶಿ ಕಳುವಾಗಿ ಪಲ್ಲಿಯಾದರೂ ಸ್ವಲ್ಪ ಮಟ್ಟಕ್ಕೆ ಉಳಿದಿರಬಹುದು. ಇದನ್ನು ನಾನುಮಾನ್ಯ ಸಚಿವರ ಗಮನಕ್ಕೆ ತರುತ್ತಿದ್ದೇನೆ. ಅಲ್ಲದೇ ನನ್ನ ಎರಡನೇ ಪ್ರಶ್ನೆಗೆ.....

ಅಧ್ಯಕ್ಷರು :– ಸಪ್ಲಿಮೆಂಟರಿ ಕೇಳಿ. ನಿಮ್ಮ ಪ್ರಶ್ನೆಯನ್ನು ಓದಿ ಹೇಳಬೇಡಿ ಸಪ್ಲಿಮೆಂಟರಿ ಒಂದೇ ಸಲ ಹೇಳಿ.

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ :– ಮಾನ್ಯ ಅಧ್ಯಕ್ಷರೇ, ನನ್ನ ಎರಡನೇ ಪ್ರಶ್ನೆಗೆ ಹಾಗಿದ್ದರೆ ಆ ಕಾಲುವೆಗಳು ಹೂಳು ತುಂಬಿ ನೀರು ಸರಬರಾಜಾಗದೆ ರೈತರಿಗೆ ನಷ್ಟ ಹಾಗುವುದಿಲ್ಲವೇ ಎಂದರೆ ನೀರು ಸರಬರಾಜಿಗೆ ತೊಂದರೆಯಾಗದಂತೆ ನೋಡಿಕೊಳ್ಳಲಾಗುತ್ತಿದೆ. ಎಂದು ಉತ್ತರವನ್ನು ನೀಡಿದ್ದಾರೆ. ಕಾಲುವೆಗಳಲ್ಲಿ ನಿಗಾ ವಹಿಸುವವರು ಯಾರೂ? ಈ ಸಣ್ಣ ನೀರಾವರಿ ಇಲಾಖೆ ಜೆಇ ಗಳಾಗಲಿ, ಮೇಸ್ತ್ರಿಗಳಾಗಲಿ,ನೀರುಗಂಟಿಯವರಾಗಲಿ ಆ ಕೆರೆಗಳ ಕಡೆಗೆ ಹೋಗುವುದೇ ಇಲ್ಲ. ಆ ಕಾಲುವೆಗಳನ್ನು ನೋಡುವುದೇ ಇಲ್ಲ. ಇದರಿಂದ ಪರ್ಶಿಗಳು ಕಳುವಾಗಿ ಪಕ್ಕದಲ್ಲಿರುವ ಮಣ್ಣು ಆ ಕಾಲುವೆಗಳಲ್ಲಿ ತುಂಬಿ ನೀರು ಸರಬರಾಜು ಆಗುವುದೇ ಇಲ್ಲ. ಇದರಿಂದ ರೈತರು ಬಹಳ ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಅಲ್ಲದೇ ನಮ್ಮ ಭಾಗದಲ್ಲಿ ಆಪಿಪುರ್ ಕೆರೆ ಎಂದು ಅದಕ್ಕೆ 8–10 ಕೋಟಿ ರೂಪಾಯಿಗಳು ಖರ್ಚಾಗಿ ನಾಲ್ಕು ಸಾವಿರ ಎಕರೆ ಭೂಮಿಗೆ ನೀರಾವರಿಯಾಗುವುದು. ಆ ಕಾಲುವೆಗಳು ಸರಿಯಾಗಿಲ್ಲದೆ ಒಂದು ಸಾವಿರ ಎಕರೆಗೂ ಸಹಾ ನೀರಾವರಿಯಾಗುವುದಿಲ್ಲ. ಇದನ್ನು ಸರಿಪಡಿಸಲು ತಮ್ಮ ಮುಖಾಂತರ ಮಾನ್ಯ ಸಚಿವರನ್ನು ನಾನು ವಿನಂತಿಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :– ಮಾನ್ಯ ಅಧ್ಯಕ್ಷರೇ, ಕೆಲವು ಕಡೆ ಈ ಕಾಲುವೆಗಳನ್ನು ಶಹಾಬಾದ್ ಸ್ಟೋನ್‌ನಿಂದ ಕನ್‌ಸ್ಟ್ರಕ್ಟ್ ಮಾಡಿದ್ದಾರೆ. ಈ ಶಹಾಬಾದ್ ಸ್ಟೋನ್ಸ್‌ಗಳನ್ನು ಅನೇಕ ಕಡೆ ಏನು ಮಾಡುತ್ತಾರೆಂದರೆ ಹಳ್ಳಿಯ ಜನ ಅದನ್ನು ಬಿಚ್ಚಿಕೊಂಡು ತಮ್ಮ ಮನೆಗೆ ಒಯ್ಯುತ್ತಾರೆ. ಕೆಲವು ಸಲ ಏನೆಂದರೆ ಆ ಪರ್ಶಿಗಳನ್ನು ದನದ ಕೋಠಡಿ ಮಾಡುವುದಕ್ಕೆ ಅಥವಾ ಅಂಗಳದಲ್ಲಿ ಹಾಕಿಕೊಳ್ಳುವುದಕ್ಕೆ ಒಯ್ಯುತ್ತಾರೆ. ಹೀಗಾಗಿ ಆ ಸಹಾಬಾದ್ ಸ್ಟೋನ್ಸ್‌ನ್ನು ಉಪಯೋಗ ಮಾಡತಕ್ಕದ್ದು

ಪ್ರಯೋಜನವಾಗುತ್ತಿಲ್ಲ. ಅದಕ್ಕೆ ಕಾಂಕ್ರೀಟಿಂಗ್ ಮಾಡಬೇಕೆಂದರೆ ಆ ಎಸ್ಟಿಮೇಟ್‌ನಲ್ಲಿ ಕಾಂಕ್ರೀಟ್ ಲೈನಿಂಗ್ ಸೇರಿಲ್ಲ. ಈಗ ಶಹಬಾದ್ ಪರ್ಶಿಗೆ ಎರಡು ಲಕ್ಷದ ತೊಂಭತ್ತನಾಲ್ಕು ಸಾವಿರ ಒಂದು ಕಿಲೋಮೀಟರ್‌ಗೆ ಖರ್ಚು ಬರುತ್ತಿದ್ದರೆ ಈ ಕಾಂಕ್ರೀಟ್ ಲೈನಿಂಗ್ ಸುಮಾರು 3:15 ಲಕ್ಷ ರೂಪಾಯಿಗಳು ಬರುತ್ತದೆ ಅಂದರೆ ಹೆಚ್ಚು ಕಡಿಮೆ ಮೂರು ಲಕ್ಷ ಮತ್ತು ಫಾರ್ ಮೆಟಲ್ ಅಂಡ್ ಸ್ಕಾಂಡ್ ಅದೊಂದು 80 ಸಾವಿರ ರೂ ಅಂದರೆ ಒಟ್ಟು 3.95 ಲಕ್ಷ ರೂಪಾಯಿಗಳು ಒಂದು ಕಿಲೋ ಮೀಟರ್‌ಗೆ ಲೈನಿಂಗ್ ಮಾಡುವುದಕ್ಕೆ ಹಣ ಬೇಕು. ಅದಕ್ಕೆ ಇಷ್ಟೊಂದು ಹಣವನ್ನು ಖರ್ಚು ಮಾಡಿದರೆ ಅದು ಎಕಾನಾಮಿಕಲಿ ಫೀಜಿಬಲ್ ಆಗುವುದಿಲ್ಲ. ಒಂದು ಕಡೆ ಎಕಾನಾಮಿಕಲ್ ಫೀಜಿಬಲ್ ಆಗುವುದಿಲ್ಲ. ಇನ್ನೊಂದು ಕಡೆ ಇಷ್ಟು ದೊಡ್ಡ ಕೆರೆಗಳನ್ನು ನಿರ್ಮಾಣ ಮಡಿ ರೈತರಿಗೆ ನಾವು ನೀರು ಕೊಡದೇ ಹೋದರೆ ಅದು ಪ್ರಯೋಜನವೂ ಆಗುವುದಿಲ್ಲ. ಅದಕ್ಕೆ ಇದರ ಬಗ್ಗೆ ನಾವು ಪುನರ್ ಪರಿಶೀಲನೆ ಮಾಡತಕ್ಕ ಅವಶ್ಯಕತೆ ಇದೆ. ಮತ್ತು ಈ ಎಸ್ಟಿಮೇಟ್ ಮಾಡುವಾಗಲೇ ಈ ಸಿಮೆಂಟ್ ಲೈನಿಂಗ್‌ನದ್ದನ್ನೇ ನಾವು ಎಸ್ಟಿಮೇಟ್ ಮಾಡಿ ಪಕ್ಕಾ ಕಾಲುವೆಗಳನ್ನು ಮಾಡತಕ್ಕಂಥ ಅವಶ್ಯಕತೆ ಇದೆ. ಈಗ ಸಧ್ಯಕ್ಕೆ ಹಣದ ಅಭಾವದಿಂದ ನಾವು ಆ ಕೆಲಸವನ್ನು ತೆಗೆದುಕೊಂಡಿಲ್ಲ. ಆದರೆ ಎಲ್ಲೆಲ್ಲಿ ದುರಸ್ತಿ ಕೆಲಸ ಮಾಡಬೇಕು ಅಥವಾ ನೀರನ್ನು ಸರಳವಾಗಿ ಫೀಲ್ಡ್‌ಗೆ ಹೋಗಬೇಕಾದರೆ ಏನು ರಿಪೇರಿ ಮಾಡಬೇಕು, ಆ ರಿಪೇರಿ ಮಾಡುವುದಕ್ಕೆ ನಾನು ಸಂಬಂಧಪಟ್ಟಂಥ ಎಕ್ಸಿಕ್ಯೂಟಿವ್ ಇಂಜಿನಿಯರ್ ಅವರಿಗೆ ಆದೇಶವನ್ನು ಕೊಡುತ್ತೇನೆ ಮತ್ತು ಅವರ ಹೇಳಿದಂತೆ ಎಲ್ಲೆಲ್ಲಿ ಆಲಿಮರ್ ಕೆರೆ ಅಲ್ಲಿ ತೊಂದರೆ ಇದೆ ಎಂದು ಹೇಳಿದ್ದಾರೆ, ಅದರ ಬಗ್ಗೆ ಕೂಡ ಅವರನ್ನು ಕರೆಸಿ ಮತ್ತು ಸಂಬಂಧಪಟ್ಟಂಥ ಚೀಫ್ ಇಂಜಿನಿಯರ್‌ರವರನ್ನೂ ಕರೆಸಿ ಏನು ತೊಂದರೆ ಇದೆ, ಅದನ್ನು ಯಾವ ರೀತಿಯಾಗಿ ನಿವಾರಣೆ ಮಾಡಬೇಕೆನ್ನತಕ್ಕಂಥದ್ದನ್ನು ಅವರಿಬ್ಬರಿಗೆ ಕೊಡಿಸಿ ಇದನ್ನು ಬಗೆಹರಿಸತಕ್ಕಂಥ ಪ್ರಯತ್ನವನ್ನು ನಾನು ಮಾಡುತ್ತೇನೆ.

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ :– ಮಾನ್ಯ ಅಧ್ಯಕ್ಷರೇ, ಒಂದು ವೇಳೆ ಕಾಂಕ್ರೀಟ್‌ನಿಂದ ಹೆಚ್ಚು ವೆಚ್ಚವಾಗುತ್ತಿದ್ದರೆ ಆಯಾ ಭಾಗದಲ್ಲಿ ಸಿಗುವ ಗ್ರಾನೈಟ್ ಕಲ್ಲುಗಳು ಅಥವಾ ಶಹಬಾದ್ ಕಲ್ಲುಗಳಿಂದ ನಿರ್ಮಾಣ ಮಾಡಿ ಸಹಾ ಗಟ್ಟಿಮುಟ್ಟಾಗಿ ಕೂಡ ಮಾಡಬಹುದು. ಮತ್ತು ಅನುದಾನದ ಲಭ್ಯತೆ ಎಷ್ಟಿರುತ್ತದೋ ಅಷ್ಟರಲ್ಲಿ ಆದಷ್ಟು ಮಟ್ಟಿಗೆ ಕೆಲಸ ಮಾಡಿದರೆ ಅದಕ್ಕೆ ಒಂದು ರೀತಿ ರೈತರಿಗೆ ಅನುಕೂಲವಾಗುತ್ತದೆಂದು ತಮ್ಮ ಮುಖಾಂತರ ಮಾನ್ಯ ಸಚಿವರನ್ನು ನಾನು ವಿನಂತಿಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :– ಮಾನ್ಯ ಅಧ್ಯಕ್ಷರೇ, ಈಗ ಹೊಲವೇ ನಿಂತು ಬೇಲಿ ಮೇಯ್ದಮೇಲೆ ಏನು ಮಾಡಬೇಕು? ಹಿಂದೆ ಶಹಬಾದ್ ಸ್ಟೋನನ್ನು ಹಾಕುತ್ತಿರಲಿಲ್ಲ. ಏನೂ ಹಾಕುತ್ತಿರಲಿಲ್ಲ, ಅವರಿಗೆ ಗೊತ್ತಿದೆ. ಇಂಥ ಮಣ್ಣಿನ ಕಾಲುವೆಗಳೇ ಇದ್ದವು. ಆದರೆ ಅದಕ್ಕೆ ರೈತರು ಸರಿಯಾಗಿ ನೋಡಿಕೊಂಡು ಕೆಲಸ ಮಾಡುತ್ತಿದ್ದರು. ಅಥವಾ ಎಲ್ಲೆಲ್ಲಿ ಇಂಥ ಶಹಾಬಾದ್ ಸ್ಟೋನ್ ಹಾಕಿದರೂ ಕೂಡ ರೈತರು ಸ್ವಲ್ಪ ಅಲರ್ಟ್ ಆಗಿ ಈ ಆಸ್ತಿ ನಮ್ಮದು, ನಮಗೆ ಅನುಕೂಲವಾಗುತ್ತದೆ, ಇದನ್ನು ಕಳ್ಳತನ ಮಾಡಬಾರದು ಅಥವಾ ತೆಗೆದುಕೊಂಡು ಹೋಗಬಾರದು ಎನ್ನತಕ್ಕ ಭಾವನೆ ಇತ್ತು. ಈಗ ನಾನು ಹೇಳಿದಹಾಗೆ ಬೇಲಿಯೇ ನಿಂತು ಹೊಲ ಮೇಯುವುದಕ್ಕೆ ಶುರುವಾದ ಹಾಗೆ ಆಗಿದೆ. ಅದಕ್ಕಾಗಿ ಇಂಥವುಗಳನ್ನು ಪ್ರಿವೆಂಟ್ ಮಾಡತಕ್ಕದ್ದು ಬಹಳ ಕಷ್ಟ. ಎಲ್ಲಿಯವರೆಗೆ ಅಚ್ಚುಕಟ್ಟುದಾರರು ಅಥವಾ ಟ್ಯಾಂಕ್ ಕೆಳಗೆ ಫಲಾನುಭವಿಗಳೇನು ಇರುತ್ತಾರೆ, ಅವರೇನಾದರೂ

ಒಂದು ಸ್ವಂತ ಸಂಸ್ಥೆ ಅಥವಾ ಒಂದು ಸೊಸೈಟಿಯನ್ನೋ ಮಾಡಿಕೊಂಡು ಇದಕ್ಕೆ ಅವರು ಪ್ರೊಟೆಕ್ಷನನ್ನು ಕೊಟ್ಟಾಗ ಮಾತ್ರ ಇಂಥದ್ದನ್ನು ನಾವು ತಡೆಗಟ್ಟಬಹುದು. ಇಲ್ಲದಿದ್ದರೆ ಅವರು ಹೇಳಿದ ಹಾಗೆ ಈ ಗ್ರಾನೈಟ್ ಸ್ಟೋನ್ ಆಗಲಿ ಅಥವಾ ಅಲ್ಲಿರುವ ಸ್ಥಳೀಯ ಕಲ್ಲುಗಳನ್ನು ಉಪಯೋಗ ಮಾಡಿಕೊಂಡು ಮಾಡಿದರೂ ಕೂಡ ಅದರ ಖರ್ಚು ಎಷ್ಟು ಅದನ್ನೂ ಕೂಡ ನೋಡಬಹುದು. ಅದನ್ನು ಕಾಂಕ್ರೀಟ್ ಲೈನ್‌ಗಿಂತ ಚೀಪರ್ ಆದರೆ ಮತ್ತು ಶಹಾಬಾದ್ ಸ್ಟೋನ್ ಅಷ್ಟೇ ಅದಕ್ಕೆ ಖರ್ಚು ಬಂದರೆ ಖಂಡಿತವಾಗಿಯೂ ಆ ಶಹಾಬಾದ್ ಸ್ಟೋನ್‌ಗೆ ಖರ್ಚು ಮಾಡತಕ್ಕಂಥದ್ದೇ ಆ ಕಲ್ಲಿಗೆ ಖರ್ಚು ಮಾಡಿ ನಾವು ಕಟ್ಟಿಸಬಹುದು. ಅದನ್ನೂ ಕೂಡ ನಾನು ಪರಿಶೀಲನೆ ಮಾಡಿಸುತ್ತೇನೆ.

ಅಧ್ಯಕ್ಷರು :– ಮುಂಚಿನ ಪ್ರಶ್ನೆ ಮಾನ್ಯ ಸುರೇಶ್ ಬಾಬು.

(ಮಾನ್ಯ ಸದಸ್ಯರು ಗೈರುಹಾಜರಾಗಿದ್ದರು)

ಮುಂದಿನ ಪ್ರಶ್ನೆ ಮಾನ್ಯ ಕರಡಿ ಸಂಗಣ್ಣನವರದು.

(ಮಾನ್ಯ ಸದಸ್ಯರು ಗೈರುಹಾಜರು)

ಮಾನ್ಯ ಸಭಾಪತಿಯವರೇ, ನಿಮ್ಮ ಪ್ರಶ್ನೆಯನ್ನು ಮುಂದಿನ ಮಂಗಳವಾರ ತೆಗೆದುಕೊಳ್ಳೋಣ.

ಪ್ರಶ್ನೆ ಸಂಖ್ಯೆ :403 (2949)

ಉತ್ತರದ ಪ್ರತಿಯನ್ನು ಉಗತ್ತಿಸಿದೆ.

ಪಶ್ಚಿಮ ವಾಹಿನಿ ಯೋಜನೆ

403 (2949) : ಶ್ರೀ ಯೋಗೀಸ್ ಭಟ್.ಎನ್. (ಮಂಗಳೂರು) ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕರಾವಳಿ ಜಿಲ್ಲೆಗಳಲ್ಲಿ ನದಿಗಳ ನೀರು ಹರಿದು ಸಮುದ್ರಕ್ಕೆ ಸೇರುವ ಮೊದಲೆ ಸದುಪಯೋಗಮಾಡಲು, ಅವಶ್ಯಕವಾದ ಪಶ್ಚಿಮ ವಾಹಿನಿ ಯೋಜನೆಯನ್ನು ಯಾವಾಗ ಆರಂಭ ಮಾಡಲಾಗುವುದು: ಇದಕ್ಕೆ ತಗಲುವ ಖರ್ಚು ಎಷ್ಟು;

ಆ) ಈ ಬಗ್ಗೆ ಸಂಪನ್ಮೂಲಗಳನ್ನು ಕ್ರೋಡಿಕರಿಸಲು ಪಶ್ಚಿಮ ವಾಹಿನಿ ನಿಗಮ ಆರಂಭಿಸಲಾಗುವುದೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು)

ಅ) ರೂ. 295.00 ಕೋಟಿ ಅಂದಾಜು ಮೊತ್ತದ ಪಶ್ಚಿಮವಾಹಿನಿ ಯೋಜನೆಯನ್ನು ಅನುಮೋದನೆಗಾಗಿ ಆಯುಕ್ತರು, ಕೇಂದ್ರ ಜಲ ಆಯೋಗ, ನವದೆಹಲಿ ಇವರಲ್ಲಿಗೆ ಸರ್ಕಾರದ ಪತ್ರ ದಿನಾಂಕ:1–4–2003 ರಲ್ಲಿ ಸಲ್ಲಿಸಲಾಗಿದ್ದು, ಅನುಮೋದನೆ ದೊರಕಿದ ಕೂಡಲೇ ಯೋಜನೆಯನ್ನು ಪ್ರಾರಂಭಿಸಲು ಕ್ರಮ ತೆಗೆದುಕೊಳ್ಳಲಾಗುವುದು.

ಆ) ಅಂತಹ ಪ್ರಸ್ತಾವನೆ ಇರುವುದಿಲ್ಲ.

ಶ್ರೀ ಎನ್. ಯೋಗೀಶ್ ಭಟ್ :– ಮಾನ್ಯ ಅಧ್ಯಕ್ಷರೇ, ನಾಲ್ಕು ವರ್ಷಗಳ ನಂತರವಾದರೂ ಈ 295 ಕೋಟಿ ರೂಪಾಯಿಗಳ ಅಂದಾಜು ವೆಚ್ಚ ಪಶ್ಚಿಮ ವಾಹಿನಿ ಯೋಜನೆಗೆ ಒಂದು ಕಾರ್ಯರೂಪಕ್ಕೆ ತರಲಿಕ್ಕೆ ಮಾಡಿದಂಥ ಪ್ರಯತ್ನಕ್ಕೆ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಆದರೆ ಇಲ್ಲಿ ವಿಶೇಷವಾಗಿ ಎಷ್ಟು ಹೆಕ್ಟೇರ್ ಪ್ರದೇಶಗಳಲ್ಲಿ ನೀರಾವರಿ ವ್ಯವಸ್ಥೆ ಸೌಲಭ್ಯ ಇದರಿಂದ